10. ಬಿಹೆಚ್‌ಎಂಎಸ್

11. ಎಂಡಿ ಹೋಮಿಯೋಪತಿ

12. ಬಿಯುಎಂಎಸ್

ಫಾರ್ಮಸಿ

13. ಬಿ.ಫಾರ್ಮಾ

14. ಎಂ.ಫಾರ್ಮಾ

ನರ್ಸಿಂಗ್

15. ಬಿ.ಎಸ್ಸಿ (ನರ್ಸಿಂಗ್)

16. ಎಂ.ಎಸ್ಸಿ (ನರ್ಸಿಂಗ್)

ಪ್ಯಾರಾ ಮೆಡಿಕಲ್

17. ಬಿ.ಎಸ್ಸಿ ಫಿಸಿಯೋಥೆರಪಿ (ಬಿಪಿಟಿ)

18. ಎಂ.ಎಸ್ಸಿ ಫಿಸಿಯೋಥೆರಪಿ (ಎಂಪಿಟಿ)

19. ಬಿ.ಎಸ್ಸಿ ರೆನಾಲ್ ಡಯಾಲ್‌ಸಿಸ್ ಟೆಕ್ನಾಲಜಿ

20. ಬಿ.ಎಸ್ಸಿ ಎಂಎಲ್‌ಟಿ

21. ಬಿ.ಎಸ್ಸಿ ರೇಡಿಯೋಗ್ರಫಿ

22. ಬಿ.ಎಸ್ಸಿ ನ್ಯೂರೋಸೈನ್ಸ್ ಟೆಕ್ನಾಲಜಿ

23. ಬಿ.ಎಸ್ಸಿ ಫರ್‌ಫ್ಯೂಷನ್ ಟೆಕ್ನಾಲಜಿ

24. ಬಿ.ಎಸ್ಸಿ ಕಾರ್ಡಿಯಾಕ್ ಕೇರ್ ಟೆಕ್ನಾಲಜಿ

25. ಬಿ.ಎಸ್ಸಿ ರೆಸ್‌ಫಿರೇಟರಿ ಟೆಕ್ನಾಲಜಿ

26. ಬಿ.ಎಸ್ಸಿ ಆಪರೇಷನ್ ಥಿಯೇಟರ್ ಟೆಕ್ನಾಲಜಿ

27. ಎಂಎಸ್ಸಿ ಹಾಸ್ಪಿಟಲ್ ಆಡ್ಮಿನಿಸ್ಟ್ರೇಷನ್

28. ಎಂ.ಎಸ್ಸಿ ಪಿ.ಎಸ್.ಆರ್.

ಬೈಲಹೊಂಗಲ್ ತಾಲ್ಲೂಕಿನಲ್ಲಿ ಗ್ರಂಥಾಲಯಗಳ ಸ್ಥಾಪನೆ ಬಗ್ಗೆ

65 (77) - ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) : ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಾಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಬೈಲವಾಡ ಗ್ರಾಮದಲ್ಲಿ ಹಾಗೂ ಸವದತ್ತಿ ತಾಲ್ಲೂಕಿನ ತಡಸಲೂರ (ತನಿಕೊಳ್ಳ) ಮತ್ತು ಸುತಗಟ್ಟಿ ಗ್ರಾಮಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ;

ಶ್ರೀ ಬಾಬುರಾವ್ ಚವಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು) :

ಅ) 2002-03ನೇ ಸಾಲಿನಲ್ಲಿ ಈ ಕೆಳಕಂಡ ಗ್ರಾಮಗಳಲ್ಲಿ

1) ಬೈಲವಾಡ

2) ತಡಸಲುರ (ತನಿಕೊಳ್ಳ)

3) ಸುತಗಟ್ಟಿ

ಗ್ರಂಥಾಲಯಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಬೈಲಹೊಂಗಲ್ ತಾಲ್ಲೂಕಿನ ಬೆಳವಡಿ ಗ್ರಾಮದಲ್ಲಿ ಸರ್ಕಾರಿ ಡಿಪ್ಲೋಮಾ ಕಾಲೇಜು ಪ್ರಾರಂಭಿಸುವ ಕುರಿತು

67 (81) - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಬೆಳವಾಡಿ ಗ್ರಾಮದಲ್ಲಿ ಡಿಪ್ಲೋಮಾ ಕಾಲೇಜನ್ನು ಪ್ರಾರಂಭಿಸಲು ಪ್ರಸ್ತಾವನೆಯನ್ನು ದಿಲ್ಲಿಯ ಎ.ಐ.ಸಿ.ಟಿ.ಇ ಗೆ ಕಳುಹಿಸಲಾಗಿದೆಯೇ;

ಆ) ಹಾಗಿದ್ದಲ್ಲಿ ಕೂಡಲೇ ಇಲ್ಲಿ ಸರ್ಕಾರಿ ಡಿಪ್ಲೋಮಾ ಕಾಲೇಜಿನ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಡಾ॥ ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು

ಆ) ಎ.ಐ.ಸಿ.ಟಿ.ಇ ನವದೆಹಲಿರವರಿಂದ ಅನುಮೋದನೆ ಬಂದ ನಂತರ ಈ ಬಗ್ಗೆ ಪರಿಶೀಲಿಸಲಾಗುವುದು.

ರಾಜ್ಯದಲ್ಲಿ ಗೃಹ ನಿರ್ಮಾಣ ಮಂಡಳಿ ಬಗ್ಗೆ

71 (105) - ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಗೃಹ ನಿರ್ಮಾಣ ಮಂಡಳಿಯವರು ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ತೆಗೆದುಕೊಂಡಿರುವ ಕಟ್ಟಡಗಳ ಸಂಖ್ಯೆ ಎಷ್ಟು (ವರ್ಷವಾರು ಮಾಹಿತಿ ನೀಡುವುದು);